ಶ್ರೀ ಎಂ.ಜಿ. ಮುಳೆ(ಬಸವಕಲ್ಯಾಣ): ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಅಧಿಕಾರವಿದೆ ಅವರು ಮಾಡಿರತಕ್ಕಂಥದ್ದು ಕಾನೂನಿನ ಪ್ರಕಾರವಾಗಿದೆ. ಅಲ್ಲಿ ಏನು ನಡೆದಿದೆ ಅದರ ಬಗ್ಗೆ ಎನ್‌ಕ್ವಯರಿ ಆಗುತ್ತಿದೆ, ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಇದರ ಬಗ್ಗೆ ಲೋಕಾಯುಕ್ತದವರಿಂದ ಎನ್‌ಕ್ವಯರಿ ಮಾಡುವ ಬಗ್ಗೆ ಆರ್ಡರ್‌ನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಪದೇ ಪದೇ ಅದೇ ಇಷ್ಯೂವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯಿತಿಯ ಚುನಾವಣೆಯಲ್ಲಿ ಒಂದು ಸೀಟನ್ನು ಗೆಲ್ಲಲು ಸಾಧ್ಯವಾಗಲಿಲ್ಲವಾದ ಕಾರಣದಿಂದ ಆದರೆ ಡಿಫೀಟ್ ಆಗಿದೆ ಎಂದು ಪದೇಪದೇ ಅವರು ಅದನ್ನು ರಿಪೀಟ್ ಮಾಡುತ್ತಿದ್ದಾರೆ. ಏನಾದರೂ ಅಲ್ಲಿ ಹೆಚ್ಚುಕಡಿಮೆಯಾಗಿದ್ದರೆ ನಿಜವಾಗಿಯೂ ತನಿಖೆ ನಡೆಯುತ್ತಿದೆ ಅನಂತರ ತಿಳಿಯುತ್ತದೆ ಅವರು ಎನ್‌ಕ್ವಯರಿ ರಿಪೋರ್ಟ್ ಬರುವರೆಗೂ ಕಾಯುವುದಕ್ಕೆ ಅವರು ಸಿದ್ಧರಿಲ್ಲ. ಇದು ಹೌಸಾ ಅಥವಾ ಬೇರೆ ಒಂದು ವೇದಿಕೆನಾ? ಅವರು ಒಂದೇ ವಿಷಯದ ಬಗ್ಗೆ ರಿಪೀಟ್ ಮಾಡುತ್ತಿದ್ದಾರೆ. ಲೋಕಾಯುಕ್ತದವರಿಂದ ಎನ್‌ಕ್ವೆಯರಿ ನಡೆಯುತ್ತದೆ, ಅನಂತರ ಇದೆಲ್ಲವು ಸರಿಯಾಗುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಎಂ. ದಿವಾಕರಬಾಬು(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:22ನೇ ಮಾರ್ಚ್ 2001ನೇ ರಾತ್ರಿ 12 ಗಂಟೆಯಲ್ಲಿ ಈ ದುರ್ಘಟನೆಯು ನಡೆದಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಪೊಲೀಸ್ ಕಂಪ್ಲೈಂಟ್‌ನ್ನು ಕೊಟ್ಟಿದ್ದಾರೆ. ಪೊಲೀಸ್ ಕೇಸ್ ದಾಖಲಾದ ನಂತರ ಏನು ಆ್ಯಕ್ಷನ್ ಬರುತ್ತದೆ ಅದರ ಪ್ರಕಾರ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾರ್ಯಾರು ತಪ್ಪನ್ನು ಎಸಗಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಮ್ಮಲ್ಲಿ ವಿನಂತಿಸುತ್ತೇನೆ.

7. ವಿಧಾನಸಭೆಯ ಸದಸ್ಯ ಮಂತ್ರಿಗಳ ಹೇಳಿಕೆ: ಶ್ರೀ ಬಿ. ಸೋಮಶೇಖರ್‌ರವರ ಹೆಸರನ್ನು ವಿಧಾನಪರಿಷತ್ತಿನ ಸದಸ್ಯರೊಬ್ಬರು ಅಲ್ಲಿಯ ಸದನದಲ್ಲಿ ಪ್ರಸ್ತಾಪಿಸಿರುವ ಬಗ್ಗೆ

+ ಶ್ರೀ ಡಿ.ಕೆ. ಶಿವಕುಮಾರ್(ಮಾನ್ಯ ಸಹಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಸೋಮಶೇಖರ್‌ರವರು ತಮಗೆ ಒಂದು ಪತ್ರವನ್ನು ಬರೆದು ನನ್ನ ಮೇಲೆ ಕೆಲವೊಂದು ಆರೋಪಗಳನ್ನು ಮೇಲ್ಮನೆಯ ಸದಸ್ಯರು ಮಾಡಿದ್ದಾರೆ ಇದಕ್ಕೆ ಸಹಕಾರಿ ಸಚಿವರು ಸಮ್ಮತಿಸಿ ಸಿಓಡಿ ತನಿಖೆಗೆ ಒಪ್ಪಿಸಿರುವುದಾಗಿ ವರದಿಯನ್ನು ನೀಡಿದ್ದು ನನ್ನ ಮೇಲೆ ಕೆಲವು ಸುಳ್ಳು ಆರೋಪಗಳನ್ನು ಮಾಡಿ ನನ್ನ ಚಾರಿತ್ರ್ಯಕ್ಕೆ ಧಕ್ಕೆ ಬಂದಿರುತ್ತದೆ, ಇದು ನನ್ನ ಹಕ್ಕಿನ ವಿಷಯವಾಗಿರುತ್ತದೆ, ಇದರ ಬಗ್ಗೆ ನಾನು ಉತ್ತರವನ್ನು ಕೊಡಲು ಈ ಅಧಿವೇಶನದಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿದ್ದು ಅದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ತಾವು ನನ್ನ ಹೆಸರನ್ನು ಯಾವಾಗ ಕರೆಯುತ್ತೀರೆಂದು ನನಗೆ ಗೊತ್ತಾಗಲಿಲ್ಲ, ನಾನು ಆಗ ಮೇಲ್ಮನೆಯಲ್ಲಿದ್ದೆ. ಆಗ ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿ, ಮಾನ್ಯ ಸಚಿವರು ಬೆಳಗಿನಿಂದ ಮಧ್ಯಾಹ್ನದವರೆಗೆ ಸದನದಲ್ಲಿದ್ದು ಈಗ ಪ್ರಶ್ನೆ ಬರುವಂತಹ ಸಂದರ್ಭದಲ್ಲಿ ಹೊರಗಡೆ ಹೋಗಿದ್ದಾರೆ ಇದರ ಅರ್ಥವೇನು?

ಮಾನ್ಯ ಸಚಿವರು ಸದನಕ್ಕೆ ಬರಬೇಕು, ತಾವು ಸೂಚನೆಯನ್ನು ಕೊಟ್ಟರೂ ಸಹ ಅವರು ಸದನಕ್ಕೆ ಬರದಿದ್ದರೆ ಹೇಗೆ? ಎಂದು ಕೇಳಿದ್ದಾರೆ. ಮಾನ್ಯ ಸಚಿವರು ಉತ್ತರವನ್ನು ಕೊಡುವ ಬಗ್ಗೆ ಸದನಕ್ಕೆ ಬರಲಿ ಎಂದು ಕೇಳಿಕೊಂಡಿದ್ದಾರೆ. ನಾನು ನಿನ್ನೆಯ ದಿನ ಈ ವಿಚಾರದ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದೇನೆ. ನಿನ್ನೆಯ ದಿವಸ ಈ ಬಗ್ಗೆ ಉತ್ತರವನ್ನು ಕೊಟ್ಟು ಮುಗಿಸಿಬಿಡುತ್ತಿದ್ದೆ, ಆದರೆ ಕೆಲವು ಕ್ಲಾರಿಫಿಕೇಷನ್ಸ್, ಪಾಯಿಂಟ್ಸ್, ಕೆಲವೊಂದು ವಿಚಾರವನ್ನು ಅಂಕಿಅಂಶಗಳ ಆಧಾರದ ಮೇಲೆ ಅವರು ಮಾತನಾಡಿದ್ದರಿಂದ ನಾನು ಒಂದೆರಡು ವಿಚಾರಗಳನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ ನಮ್ಮ ಹಳ್ಳಿಗಳ ಕಡೆ "ಆಳ ನೋಡಿ ಬಾವಿಗೆ ಇಳಿ, ಕುಲನೋಡಿ ಹೆಣ್ಣುಕೊಡು" ಎಂದು ಒಂದು ಗಾದೆ ಇದೆ. ನಾವು ಏನಾದರೂ ಮಾತನಾಡಬೇಕಾದರೆ ಒಳಗಡೆ ಏನು ಇದೆ ಎಂದು ಮೊದಲು ಯೋಚನೆ ಮಾಡಿ ನೋಡಬೇಕಾಗುತ್ತದೆ, ನಾನು ಇದರ ಬಗ್ಗೆ ಜಾಸ್ತಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಮನಸ್ಸಿಗೆ ನೋವಾಗುತ್ತದೆ, ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರ ಮೇಲೆ ನನ್ನಗೆ ಅಭಿಪ್ರಾಯವೇನಿತ್ತು ಎಂಬುದರ ಬಗ್ಗೆ ನಾನು ನಿನ್ನೆಯ ದಿವಸವೇ ತಿಳಿಸಿದ್ದೇನೆ. ಮೇಲ್ಮನೆಯ ಸದಸ್ಯರು, ಅವರು ಅವರ ಕ್ಷೇತ್ರದವರಾಗಿದ್ದು, ಏನು ಪ್ರಸ್ತಾಪ ಮಾಡಿದ್ದಾರೆಂದರೆ, ಅವರು ಇದನ್ನು ಒಂದು ಪ್ರಶ್ನೆಯ ಮುಖಾಂತರ ತಂದರು. ಇದರ ಬಗ್ಗೆ ಅಲ್ಲಿ ಬೇಕಾದಷ್ಟು ಚರ್ಚೆಯಾಯಿತು; ನಾನು ಅದರ ಬಗ್ಗೆ ರೆಫರೆನ್ಸ್ ಮಾಡುವುದಕ್ಕೆ ನನಗೆ ಹಕ್ಕಿದೆಯೋ ಏನೋ ನನಗೆ ಗೊತ್ತಿಲ್ಲ; ತಾವು ನನಗೆ ಗೈಡ್ ಮಾಡಬೇಕಾಗುತ್ತದೆ. ಮೇಲ್ಮನೆಯಲ್ಲಿ ಶ್ರೀ ಎಂ.ಸಿ. ನಾಣಯ್ಯ, ಡಾ.ಎಂ.ಆರ್. ತಂಗಾ, ಶ್ರೀ ಯಡಿಯೂರಪ್ಪ, ಕೆ.ಹೆಚ್. ಶ್ರೀನಿವಾಸ್, ಶ್ರೀ ಸಿದ್ದರಾಜು ಈ ಐದು ಜನ ಸದಸ್ಯರುಗಳು ಈ ವಿಚಾರದಲ್ಲಿ ಬೇಕಾದಷ್ಟು ಚರ್ಚೆಯಲ್ಲಿ ಪಾಲ್ಗೊಂಡು ಇದರ ಬಗ್ಗೆ ಒತ್ತಾಯ ಮಾಡಿದರು. ಇಲ್ಲಿ ಅವರ ಮೂಲಭೂತವಾದ ಪ್ರಶ್ನೆ ಏನೆಂದರೆ, ನನಗೆ ಈ ಒಂದು ಸಿಓಡಿ ಎನ್‌ಕ್ವಾಯರಿಗೆ ಆರ್ಡರನ್ನು ಮಾಡುವುದಕ್ಕೆ ಹಕ್ಕು ಇದೆಯೋ ಅಥವಾ ಇಲ್ಲವೋ? ಅವರು ಒಂದು ಪ್ರಶ್ನೆಯನ್ನು ತಂದರು. ಇದನ್ನು ಮಾನ್ಯ ಗೃಹ ಮಂತ್ರಿಗಳು ಮಾಡಬೇಕಾಗುತ್ತದೆ. ಮಾನ್ಯ ಗೃಹಮಂತ್ರಿಗಳಿಗೂ ಮತ್ತು ನನಗೂ ವಿಶ್ವಾಸವಿದೆಯೆಂದು ತಿಳಿದು ಇದನ್ನು ತಪ್ಪಿಸಿ ಈ ರೀತಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರಿಂತ ಹೆಚ್ಚಾಗಿ ನನಗೆ ಅವರ ಮೇಲೆ ವಿಶ್ವಾಸ ವಿದೆಯೆಂದು ನಾನು ನಿನ್ನೆಯ ದಿವಸವೇ ಹೇಳಿದ್ದೇನೆ. ಇದನ್ನು ನಾನು ರೆಫರ್ ಮಾಡಲಿಕ್ಕೆ ಹಕ್ಕು ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ತಾವೇ ತೀರ್ಮಾನವನ್ನು ಮಾಡಬೇಕಾಗುತ್ತದೆ. ಸರ್ಕಾರದಲ್ಲಿರುವಂತಹ ಸಚಿವರು ಈ ಸಂದರ್ಭದಲ್ಲಿ ವಿಚಾರವನ್ನು ಹೇಳಬೇಕಾಗುತ್ತದೆ, ಇಲ್ಲಿ ಬಂದೇ ಒಂದು ವಿಚಾರದ ಬಗ್ಗೆ ನಾನು ಆನ್ ರೆಕಾರ್ಡ್ಸ್, ಹೇಳಲಿಕ್ಕೆ ಬಯಸುತ್ತೇನೆ, ಇದು ದಿನಾಂಕ 29-3-1990ರಂದು ರಿಜಿಸ್ಟರ್ ಆಗಿದೆ, 100 ಬೇಸಿನ್‌ನ್ನು ಹಾಕಬೇಕೆಂದು ಹೇಳಿ 1987ರಲ್ಲಿ ಇದಕ್ಕೆ ಮಂಜೂರಾತಿ ಪಡೆದಿದ್ದು ಅದರ ಮೊತ್ತ 88 ಲಕ್ಷ ರೂಪಾಯಿಗಳು ಫೈನಲ್ ಆಗಿ 1994ರಲ್ಲಿ 160 ಲಕ್ಷಕ್ಕೆ ಅದು ಹೋಗಿದೆ. ಸರ್ಕಾರದಿಂದ ಅದಕ್ಕೆ ಈಗಾಗಲೇ 53 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಸಂಘವು ಇದುವರೆವಿಗೂ 63 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. 1989ರಲ್ಲಿ ಯಂತ್ರೋಪಕರಣಗಳನ್ನು ಖರೀದಿ ಮಾಡಿದ್ದಾರೆ, ಬಿಲ್ಡಿಂಗ್ ಆಗುವುದಕ್ಕೆ ಮುಂಚಿತವಾಗಿಯೇ ಅಲ್ಲಿಗೆ ಯಂತ್ರೋಪಕರಣಗಳು ಬಂದಿವೆ. ಫ್ಯಾಕ್ಟರಿಯಲ್ಲಿ ಅದು ಇರಬೇಕಾಗಿತ್ತು ಅಲ್ಲಿ ಇಲ್ಲ,

ಅದು ಎಲ್ಲಿದೆ ಎಂದರೆ, ಆ ಯಂತ್ರೋಪಕರಣಗಳನ್ನು 1989ರಿಂದ ಮಳವಳ್ಳಿಯ ಟಿಎಪಿಸಿಎಂಎಸ್‌ನಲ್ಲಿ ಸುಮಾರು 11 ವರ್ಷದಿಂದ ಅದನ್ನು ಬಹಳ ಜೋಪಾನವಾಗಿ ಅದಕ್ಕೆ ಪ್ಯಾಕಿಂಗ್‌ನ್ನು ಮಾಡಿ ಇಟ್ಟಿದ್ದಾರೆ. ಆ ಯಂತ್ರೋಪಕರಣಗಳನ್ನು ಕನಕಪುರದಲ್ಲಿ ಖರೀದಿ ಮಾಡಿದ್ದಾರೆ, ಅದನ್ನು ಏತಕ್ಕಾಗಿ ಪರ್ಚೇಸ್ ಮಾಡಿದರು, ಅದನ್ನು ಪರ್ಚೇಸ್ ಮಾಡಿದಾಗ ಟೆಂಡರ್ ಏನಾಗಿತ್ತು, ಇದಕ್ಕೆ ಬ್ಯಾಂಕ್ ಗ್ಯಾರಂಟಿ ಏನಾದರೂ ಕೊಟ್ಟಿದ್ದಾರೆಯೇ? ಇದನ್ನು ಯಾರು ಮಾಡಿದರು, ಇದರ ಬಗ್ಗೆ ಸಾಕಷ್ಟು ಚರ್ಚೆಗಳು ಎಲ್ಲಾ ಪ್ರಸ್ತಾಪ ಮಾಡಿದರು. ಈ ಮಧ್ಯೆ ಎನ್‌ಸಿಡಿಸಿಯವರು ಡಿ - ಸ್ಯಾಂಕ್ಷನ್ ಏಕೆ ಮಾಡಿದರು, ಈ ಪ್ರಾಜೆಕ್ಟ್ ವಯೆಬಲ್ ಆಥವಾ ಅಲ್ಲವೇ ಎನ್ನುವ ವಿಚಾರವನ್ನು ಪ್ರಶ್ನೆ ಮಾಡಿದರು. ಇದರ ಬಗ್ಗೆ ತನಿಖೆಗಿಯವರು ಲೋಕಾಯುಕ್ತಕ್ಕೆ ಹೋಗಿದ್ದಾರೆ, ಅದರ ಬಗ್ಗೆ ಅಲ್ಲೂ ಸಹ ಸಾಕಷ್ಟು ಚರ್ಚೆಯಾಗಿದೆ, ಈ ಬಗ್ಗೆ ಸುಮಾರು 55 ಲಕ್ಷ ರೂಪಾಯಿಗಳು ಸರಿಯಾಗಿ ಉಪಯೋಗ ಆಗಿದೆಯೋ ಆಥವಾ ಇಲ್ಲವೇ? ಸರ್ಕಾರದ ಹಣಕ್ಕೆ ಎನ್‌ಸಿಡಿಸಿಗೆ ಗ್ಯಾರಂಟಿ ಇರುವಂತಹ ಸಂದರ್ಭದಲ್ಲಿ ಇಷ್ಟೆಲ್ಲವೆವಿಗೂ ಇಲ್ಲಿ ದೊಡ್ಡದೊಡ್ಡ ವ್ಯಕ್ತಿಗಳು ಅಧ್ಯಕ್ಷರಾಗಿರುವಂತಹ ಸಂದರ್ಭದಲ್ಲಿ ಇದು ಜಾಲನೆಯಾಗಲಿಲ್ಲವೆಂದಾಗ ಎಲ್ಲಿ ತಪ್ಪಿದೆ ಎಂಬುದರ ಬಗ್ಗೆ ಸರ್ಕಾರ ತಿಳಿದುಕೊಳ್ಳಬೇಕೇ ಆಥವಾ ಬೇಡವೇ ಎನ್ನುವ ಬಗ್ಗೆ ತಾವೇ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ ನಾನು ಪ್ರತಿಯೊಂದು ಹಂತದಲ್ಲೂ ಲೋಕಾಯುಕ್ತದಲ್ಲಿ ಏನು ಫೈಂಡಿಂಗ್ಸ್ ಇದೆ, ಅದರ ಬಗ್ಗೆ ನಾನು ಜಾಸ್ತಿ ಹೇಳದೆ ಬಹುಶಃ ಈ ವಿಚಾರದಲ್ಲಿ ಮಾತ್ರ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಅದನ್ನು ಕೊಡುವುದರಲ್ಲಿ ಏನಾದರೂ ಹಕ್ಕುಚ್ಯುತಿಯಾಗಿದ್ದರೆ ಅವರದ್ದೇ ಆದ ರೀತಿಯಲ್ಲಿ ಅವರು ಉತ್ತರವನ್ನು ಹೇಳಬಹುದು. ನನ್ನ ಮನಸ್ಸಿಗೆ ಬಹಳ ನೋವಾಯಿತು, ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರ ಚಾರಿತ್ರ್ಯವಧೆಯನ್ನು ನಾನಂತೂ ಮಾಡುವುದಕ್ಕೆ ಹೋಗುವುದಿಲ್ಲ. ಅವರೇನಾದರೂ ಮಾಡಿದ್ದರೆ ಅದನ್ನು ಅವರ ಮೇಲೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಮಾಡಬೇಕಾಗುತ್ತದೆ. ತಾವು ಅವರ ರಕ್ಷಣೆಗೆ ಬರಬೇಕಾಗುತ್ತದೆ. ನನಗೆ ಈ ವಿಚಾರದ ಬಗ್ಗೆ ಬಹಳಷ್ಟು ಜನರು ದೂರವಾಣಿ ಮಾಡಿ ಏನು ತಾವು ಈ ತರಹ ಮಾಡಿದ್ದೀರಿ, ಏನು ಎಂದು ಕೇಳಿದರು. ಇಲ್ಲಿ ನನ್ನ ಹತ್ತಿರ ಲೋಕಾಯುಕ್ತದವರ ಫೈಂಡಿಂಗ್ಸ್ ಮಾಡಿರುವ ಬಗ್ಗೆ, ನಮ್ಮ ಅಧಿಕಾರಿಗಳು ಒಂದು ಆರೋಪದ ಕಾಪಿಯನ್ನು ನನಗೆ ಕೊಟ್ಟಿದ್ದಾರೆ.

"The President unnecessarily paid more than Rs. 5 lakhs advance cheque to the above firm for supply of machinery. But amount taken by the President, the following are the inference drawn on verification from the....."

ಇದನ್ನು ಮುಂಚಿತವಾಗಿ ಕೊಟ್ಟರೆ, ಅದನ್ನು ಯಾವಾಗ ಅಗ್ರಿಮೆಂಟ್ ಮಾಡಬೇಕಾಗಿತ್ತು, ಏನು ಎಂಬುದರ ಬಗ್ಗೆ ಎಲ್ಲಾ ಇದೆ. ಇಲ್ಲಿ ಸರ್ಕಾರದ ಹಣ ಇರುವುದರಿಂದ ಇದರ ಬಗ್ಗೆ ಸಿಓಡಿ ಎನ್‌ಕ್ವೆಯರಿ ಆಗಲಿ ಎಂದು ಅವರು ಅಭಿಪ್ರಾಯವನ್ನು ಪಟ್ಟಮೇಲೆ ನಾನು ಬಹುಶಃ ಒಪ್ಪಿಕೊಂಡಿದ್ದೇನೆಯೇ ಹೊರತು, ಅದು ಹಕ್ಕಿದೆಯೋ ಆಥವಾ ಇಲ್ಲವೋ ಎಂಬುದರ ಬಗ್ಗೆ ತಾವು ತಿಳಿಸಬೇಕು. ಬಹಳ ಜನರು ನನಗೆ ದೂರವಾಣಿ ಮಾಡಿ ಅವರಿಗೆ ತಾವು ಏತಕ್ಕಾಗಿ

ತೊಂದರೆಯನ್ನು ಕೊಡತ್ತಿದ್ದೀರಿ ಎಂದು ಕೇಳಿದರು. ನಾನೇನು ತೊಂದರೆಯನ್ನು ಕೊಡುತ್ತಿಲ್ಲ, ನನ್ನಲ್ಲಿ ಏನು ತಪ್ಪಿದೆಯೋ, ಅವರಲ್ಲಿ ಏನು ತಪ್ಪಿದೆಯೋ, ಅಥವಾ ಆ ಸದಸ್ಯರಲ್ಲಿ ಏನು ತಪ್ಪಿದೆಯೋ ತಾವೇ ಈ ಸಂದರ್ಭದಲ್ಲಿ ಪರೀಕ್ಷೆಯನ್ನು ಮಾಡಬೇಕಾಗುತ್ತದೆ. ನನಗೆ ದೂರವಾಣಿಯನ್ನು ಮಾಡಿದಾಗ ನನ್ನ ಸ್ನೇಹಿತರು ಒಂದು ಮಾತನ್ನು ಹೇಳಿದರು, ನಿನ್ನಲಿ ಏನಾದರೂ ತಪ್ಪಿದೆಯೋ ಎಂದು ಅದಕ್ಕೆ ನಾವೆಲ್ಲರೂ ಆತ್ಮಪರೀಕ್ಷೆಯನ್ನು ಮಾಡಿಕೊಳ್ಳಬೇಕಾಗುತ್ತದೆಂದು ನಾನು ಹೇಳಿದೆ. "ಮೋಹ ಬಂದರೆ, ಮೋಹದಿಂದ ಮರ್ಯಾದೆ ತಿನ್ನುತ್ತದೆ, ಲಂಚದಿಂದ ಗೌರವ ತಿನ್ನುತ್ತದೆ, ಚಿಂತೆಯಿಂದ ಆಯುಸ್ಸು ತಿನ್ನುತ್ತದೆ, ಪ್ರಾಯಶ್ಚಿತ್ತದಿಂದ ಪಾಪ ತಿನ್ನುತ್ತದೆ, ಕೋಪ ಬುದ್ಧಿಯನ್ನು ತಿನ್ನುತ್ತದೆ, ಅಹಂಕಾರ ಜ್ಞಾನವನ್ನು ತಿನ್ನುತ್ತದೆ. ಅಸೂಯೆಯೂ ವ್ಯಕ್ತಿತ್ವವನ್ನು ತಿನ್ನುತ್ತದೆ" ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಕೆಲವು ಮುಖ್ಯವಾದ ಪ್ರಶ್ನೆಗಳು ಉದ್ಭವವಾಗುತ್ತವೆ. ಮೊದಲನೆಯದು ತಾವು ಮಾನ್ಯ ಸದಸ್ಯರಾದ ಸೋಮಶೇಖರ್‌ರವರ ರಕ್ಷಣೆಗೆ ಹೋಗಬೇಕಾಗುತ್ತದೆ. ಏಕೆಂದರೆ ಈ ಮನೆಯ ಸದಸ್ಯರಾಗಿರುವವರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಯಾಗಬಹುದೆ? ಅವರ ಮೇಲೆ ಏನಾದರೂ ಆರೋಪಗಳು ಇರಲಿ, ಆರೋಪಗಳು ಇದ್ದರೆ ಮಂತ್ರಿಗಳಾಗಿರಲಿ ಸದಸ್ಯರಾಗಿರಲಿ ನೋಟೀಸ್ ಕೊಟ್ಟು ನಿಯಮದ ಪ್ರಕಾರ ಚರ್ಚೆ ಮಾಡುವುದು ಇದೆ ಅದು ಸಂಪ್ರದಾಯವು ಹೌದು. ಬೆಳಿಗ್ಗೆ ನಾನು ವಿನಂತಿ ಮಾಡಿಕೊಂಡಿದ್ದೇನೆ, ಮೇಲ್ಮನೆಯ ಅಧ್ಯಕ್ಷರಿಗೆ ಪತ್ರವನ್ನು ಬರೆದು ಕೇಳಲಿಕ್ಕೆ ಹೇಳಿದ್ದೇವೆ. ಒಂದು ಸಾರಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಇಂಥದ್ದು ಆಗಿದೆ. ಎರಡನೆಯದಾಗಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳತಕ್ಕದ್ದು, ಕಳೆದ 13 ವರ್ಷಗಳಲ್ಲಿ ಪ್ರಾರಂಭವಾಗಿರತಕ್ಕ ಕಾರ್ಖಾನೆಗೆ ಸರ್ಕಾರದಿಂದ ಹಣ ಬಿಡುಗಡೆಯಾಗಿದೆ. ಕೇಂದ್ರದ ಎನ್‌ಸಿಡಿಸಿಯವರು ಹಣ ಬಿಡುಗಡೆಯಾಗಿರುವುದಕ್ಕೆ ಸಬ್ಸಿಡಿಯನ್ನು ರದ್ದುಮಾಡಿರತಕ್ಕದ್ದು ಅದು ಒಂದು ಭಾಗ. These are all facts. ಇದು ಆದಮೇಲೆ ವೇರಿಯಸ್ ಲೆವೆಲ್‌ನಲ್ಲಿ ಹತ್ತು-ಹದಿನೈದು ವರ್ಷಗಳಲ್ಲಿ ಕೋರ್ಟ್‌ನಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಇದರ ಬಗ್ಗೆ ಕೊಶ್ಚನ್ ಮಾಡಿದ್ದು ಎಲ್ಲವೂ ಇದೆ. ಯಾವ ಹಂತಕ್ಕೆ ತಲುಪುತ್ತಿದ್ದೇವೆಂದರೆ ಯಾವುದೋ ಒಂದು ಪರ್ಟಿಕ್ಯುಲರ್ ಸ್ಪೇಚ್‌ನಲ್ಲಿ ಲೋಕಾಯುಕ್ತದಲ್ಲಿ ಎನ್‌ಕ್ವೈರಿ ನಡೆಯುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಮೇಲ್ಮನೆಯಲ್ಲಿ ಯಾರೋ ಒಬ್ಬರು ಸದಸ್ಯರು ಆಪಾದನೆ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: Absolutely there is nothing wrong. ಲೋಕಾಯುಕ್ತದಲ್ಲಿ ಎನ್‌ಕ್ವೈರಿ ನಡೆಯುತ್ತಿದೆ. ಲೋಕಾಯುಕ್ತದವರು ಇನ್ನು ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿಲ್ಲ. ಅದು ಇನ್ನು ಲೋಕಾಯುಕ್ತದಲ್ಲಿದೆ. It is before the Lok Ayukta. The whole issue is before the Lok Ayukta. ಸಾರ್ವಜನಿಕರಾಗಲೀ ಮೇಲ್ಮನೆಯ ಸದಸ್ಯರಾಗಿರಲೀ ಫ್ಯಾಕ್ಟರಿಯ ಸದಸ್ಯರಾಗಿರಲಿ ಸರ್ಕಾರವಾಗಲಿ ಯಾರೇ ಆಗಿರಲಿ ಯಾರೂ ಸಹ ಮಿಸ್‌ಯೂಸ್ ಆಗಿರುವ ಬಗ್ಗೆ ಎನ್‌ಕ್ವಾಯರಿ ಮಾಡುವುದು ತಪ್ಪೆಂದು ಹೇಳುವುದಿಲ್ಲ. The whole thing appears to the public and also to us.

ಇಲ್ಲಿ ಮಾನ್ಯ ಸದಸ್ಯರು ಏನೋ ತಪ್ಪು ಮಾಡಿದ್ದಾರೆ ಎನ್ನುವ ಅನುಮಾನ ಬರುತ್ತದೆ. ಅವರು ಎಲ್ಲಿ ಹೇಳಬೇಕು ಅಲ್ಲಿ ಹೇಳಬೇಕು. ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕವಾಗಿ ಇದ್ದುಕೊಂಡು ಆ ವರ್ಗದ ಜನರಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿಕೊಂಡು ಇದ್ದರೆ, ಇವತ್ತು ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಟೆಕ್ಸ್‌ಟೈಲ್ಸ್ ಫ್ಯಾಕ್ಟರಿಗಳು, ಡಿಸಿಸಿ ಬ್ಯಾಂಕುಗಳು ಮುಳುಗಿ ಹೋಗಿ ಯಾವ ಸ್ಥಿತಿಯಲ್ಲಿವೆ ಎಂಬುದು ತಮಗೆ ಗೊತ್ತಿದೆ. ಇವತ್ತು ಅಲ್ಲಿ ಜಾಗ ಇದೆ ಬಿಲ್ಡಿಂಗ್ ಕಟ್ಟುತ್ತಿದ್ದಾರೆ ಮೆಷಿನರಿ ತೆಗೆದುಕೊಂಡಿದ್ದಾರೆ. ಲೋಕಾಯುಕ್ತದ ಮುಂದೆ ಎನ್‌ಕ್ವಾಯರಿಯಾಗುವಾಗ what will be the reflection on his personality? ಬಹಳ ಮುಖ್ಯವಾಗಿರತಕ್ಕ ಪ್ರಶ್ನೆ ಮತ್ತೆ when the whol;e thing is before the Lok Ayukta ಲೋಕಾಯುಕ್ತದವರು ಯಾರ ಕೈಯಲ್ಲಿ ಎನ್‌ಕ್ವಾಯರಿ ಮಾಡಿಸುತ್ತಾರೆ? Lok Ayukta is abody which has been created by this House, and again Hon'ble ಲೋಕಾಯುಕ್ತದವರು ಯಾರ ಕಡೆ ಎನ್‌ಕ್ವಾಯರಿ ಮಾಡಿಸುತ್ತಾರೆಂದರೆ ಅವರು ಪೊಲೀಸ್‌ನವರ ಕಡೆಯಿಂದ ಎನ್‌ಕ್ವಾಯರಿ ಮಾಡಿಸುತ್ತಾರೆ. ಅದು ಯಾವ ಪೊಲೀಸ್? ತಮಿಳುನಾಡಿನಿಂದ ತರಿಸುತ್ತಾರಾ? ಕೇಂದ್ರದಿಂದ ತರಿಸುತ್ತಾರಾ ಏನೂ ಇಲ್ಲ. ಕರ್ನಾಟಕದವರೆ, ಗೃಹಮಂತ್ರಿಗಳನ್ನು ಲೋಕಾಯುಕ್ತದವರು ಕನ್ಸಲ್ಟ್ ಮಾಡಿ ಅಧಿಕಾರಿಗಳನ್ನು ಡೆಪ್ಯುಟ್ ಮಾಡುತ್ತಾರೆ. ಲೋಕಾಯುಕ್ತದವರು ಇಂತಹ ಅಧಿಕಾರಿಗಳನ್ನು ಕೊಡಿಯೆಂದು ಕನ್ಸೆಂಟ್ ಕೊಡುತ್ತಾರೆ. ಆದರ ಪ್ರಕಾರ ಗೃಹಸಚಿವರು, ಮುಖ್ಯಮಂತ್ರಿಗಳು ಎಸ್‌ಪಿಯಿಂದ ಹಿಡಿದು ಪೊಲೀಸ್ ಕಾನ್‌ಸ್ಟೇಬಲ್‌ರವರೆಗೆ ವರ್ಗಾವಣೆ ಮಾಡುತ್ತಾರೆ. When there is an enquiry before the Lok Ayukta by the very same set of police, what is the necessity for referring this matter to C.O.D.? ಮಾನ್ಯ ನಾಣಯ್ಯನವರು ತಂಗಾರವರು, ಯಡಿಯೂರಪ್ಪನವರು ಯಾರೇ ಇರಬಹುದು ಎಲ್ಲಾ ಪಕ್ಷದವರು ಬೇಡಿಕೆಯನ್ನು ಇಟ್ಟಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ತಾವು ಸಹಕಾರ ಸಚಿವರು ಅದನ್ನು ಮತ್ತೆ ಸಿಒಡಿ ಎನ್‌ಕ್ವಾಯರಿಗೆ ಕೊಡತಕ್ಕ ಅವಶ್ಯಕತೆ ಏನು? ಹಾಗಾದರೆ ನಿಮಗೆ ಲೋಕಾಯುಕ್ತದವರ ಮೇಲೆ ನಂಬಿಕೆ ಇಲ್ಲವೋ? ಆ ಪ್ರಶ್ನೆ ಉದ್ಭವವಾಗುತ್ತದೆ. ಮಾನ್ಯ ಸೋಮಶೇಖರ್‌ರವರು ಕಷ್ಟಪಟ್ಟು ನಾಲ್ಕು ಸಾರಿ ವಿಧಾನಸಭೆಗೆ ಗೆದ್ದು ಬಂದಿದ್ದಾರೆ. ದಲಿತವರ್ಗದಿಂದ ಬಂದಂತಹ ನೊಂದಿರತಕ್ಕ ವ್ಯಕ್ತಿಯನ್ನು ತೇಜೋವಧೆ ಮಾಡಿದಹಾಗೆ ಆಗುತ್ತದೆ. ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿನ ಹೇಳಿದ್ದೇನೆ. ಮಾನ್ಯ ಮಂತ್ರಿಗಳು ಕೊಟ್ಟಂತಹ ವಿವರಣೆಗಳು ಏನಿವೆ ಅವು ಸಂಪೂರ್ಣವಾದ ಮಾಹಿತಿಯಿಂದ ಕೂಡಿಲ್ಲ. ಸ್ವಲ್ಪ ವಿವರವನ್ನು ಮಾತ್ರ ತಿಳಿದುಕೊಂಡಿದ್ದಾರೆ. ಮೆಷಿನರಿ ಪರ್ಚೇಸ್ ಮಾಡಿದ್ದು, ಟೆಂಡರ್ ಕರೆದು ಮಾಡಿದ್ದು, ಎಷ್ಟು ಹಣ ಪಾವತಿ ಮಾಡಲಾಗಿದೆ ಈ ಎಲ್ಲ ವಿಚಾರಗಳ ಬಗ್ಗೆ ಅಂದಿನ ಸರ್ಕಾರಕ್ಕೆ 1990ರಲ್ಲಿ ಒಂದು ಆರೋಪ ಮಾಡಿದಾಗ ಸೂಪರ್‌ಸೀಡ್ ಮಾಡಿದ್ದಾರೆ. ಸೂಪರ್‌ಸೀಡ್ ಮಾಡಿದ ಮೇಲೆ ನಮಗೆ ಒಂದು ಅವಕಾಶವನ್ನು ಕೊಡದೆ ಸೂಪರ್‌ಸೀಡ್ ಮಾಡಿದ್ದಾರೆ ಅದು ತಪ್ಪು, ಎನ್‌ಸಿಡಿಸಿ ಗೈಡ್‌ಲೈನ್ಸ್ ಪ್ರಕಾರ ಮಾಡಿರತಕ್ಕದ್ದು. ಇಲಾಖೆಯ ಟೆಕ್ನಿಕಲ್ ಕಮಿಟಿಯ ಶಿಫಾರಸ್ಸಿನ ಮೇಲೆ ಮಾಡಿರತಕ್ಕದ್ದು, ಆಡಳಿತ ಮಂಡಳಿಯದು ಏನೂ

ತಪ್ಪಿಲ್ಲವೆಂದು ವಿವರಣೆ ಕೊಟ್ಟಮೇಲೆ ಹೈಕೋರ್ಟ್‌ನಲ್ಲಿ ಕೇಸನ್ನು ವಜಾ ಮಾಡಿದರು. ಅದು ಮೊದಲನೆಯ ಹಂತ. ಎರಡನೆಯ ಕಂತು ಹಣವನ್ನು ಬಿಡುಗಡೆ ಮಾಡಬೇಕಾದರೂ ಆಡಿಟ್ ರಿಪೋರ್ಟ್ ಇದೆ ಏನೇನು ಆಗಿದೆ ಅದೆಲ್ಲವೂ ಇದೆ. 1997ರಲ್ಲಿ ಎರಡನೆಯ ಕಂತು ಹಣವನ್ನು ಬಿಡುಗಡೆ ಮೊಡಲಾಗಿದೆ. ಅಲ್ಲಿಯವರೆಗೆ ಈಗ ಏನು ಆರೋಪ ಮಾಡಿದ್ದಾರೆ ಅದೇ ವ್ಯಕ್ತಿ 20-25 ಪಿಟಿಷನ್ಸ್ ಬರೆದಿದ್ದಾರೆ. ಈಗ ಅವರು ಮೇಲ್ಮನೆಯ ಸದಸ್ಯರಾಗಿದ್ದಾರೆ. ಅವರು ಏನೇ ಅರ್ಜಿ ಬರೆದರೂ ಅದರಲ್ಲಿ ತಿರುಳಿಲ್ಲವೆಂದು ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಈ ನಡುವೆ ಕಟ್ಟಡದ ಕೆಲಸ ನಡೆಯುತ್ತಿದೆ. ಅಪರಾಧ ಮಾಡಿದ್ದಾರೋ ಇಲ್ಲವೋ ಅದಲ್ಲ ಪ್ರಶ್ನೆ. ಈ ಮನೆಯ ಸದಸ್ಯರ ಬಗ್ಗೆ ಒಂದು ಎನ್‌ಕ್ವೈಯರಿ ನಡೆಯುತ್ತಿರುವಾಗ, ಇನ್ನೊಂದು ಎನ್‌ಕ್ವೈಯರಿಗೆ ಆರ್ಡರ್ ಮಾಡಬಹುದೆ? ಹಾಗೆ ಮಾಡುವುದಕ್ಕೆ ಹಕ್ಕು ಇದೆಯೆ? ಈ ಸದನದ ಸದಸ್ಯರ ಮೇಲೆ ಮೇಲ್ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೆ? ಇದು ಬಹಳ ಸಿಂಪಲ್. ಅವರು ಅಪರಾಧಿಯೇ ಅಲ್ಲವೇ ಆ ಪುರಾಣ ಆಮೇಲೆ. ಪ್ರಶ್ನೆ ಇರುವುದು, ಈ ಮನೆಯ ಸದಸ್ಯರ ಬಗ್ಗೆ ಆ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿದೆಯೇ ಅವಕಾಶ ಇದೆಯೆ? Whether that House has power? ಈ ಪ್ರಶ್ನೆಗೆ ತಾವು ರೂಲಿಂಗ್ ಕೊಟ್ಟರೆ ಆಯಿತು.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಅದರ ಜೊತೆಗೆ ಇನ್ನೊಂದು ತೀರ್ಮಾನವನ್ನು ತಾವು ಹೇಳಬೇಕು. ಯಾರೋ ಪ್ರೈವೇಟ್‌ನವರು ಲೋಕಾಯುಕ್ತದಲ್ಲಿ ದೂರು ಕೊಟ್ಟಿರಬಹುದು. ಅಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಸಿಓಡಿ ಎನ್‌ಕ್ವೈಯರಿ ಮಾಡುವುದಕ್ಕೆ ಅವಕಾಶ ಇದೆಯೇ ಇಲ್ಲವೇ ಎನ್ನುವ ಬಗ್ಗೆ that has to be decided.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಾನು ಹೇಳತಕ್ಕದ್ದು, ಯಾವ ವ್ಯಕ್ತಿ ಆ ಸದನದಲ್ಲಿ ಈ ವಿಷಯವನ್ನು ಎತ್ತಿದ್ದಾರೆ, ಏನು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ ಅದೇ ವ್ಯಕ್ತಿ ಲೋಕಾಯುಕ್ತಕ್ಕೆ ಅರ್ಜಿ ಕೊಟ್ಟಿದ್ದಾರೆ. ಅವರ ಆಪಾದನೆಗಳ ಮೇಲೆ ಲೋಕಾಯುಕ್ತದವರು ಎನ್‌ಕ್ವೈಯರಿ ಮಾಡುತ್ತಿದ್ದಾರೆ. ಅವರು ವರದಿ ಕೊಡುವುದು ಬೇರೆ ಪ್ರಶ್ನೆ. ನಾವು ಲೋಕಾಯುಕ್ತದ ಮುಂದೆ ಏನು ವಿವರಣೆ ಕೊಡಬೇಕೋ ಕೊಡುತ್ತೇವೆ. ಅದೇ ವ್ಯಕ್ತಿ ಲೋಕಾಯುಕ್ತಕ್ಕೆ ಕೊಟ್ಟು ಅದೇ ವಿಚಾರಗಳನ್ನು ಇಲ್ಲಿ ಏನೂ ಅವ್ಯವಹಾರಗಳು ಆಗದಿದ್ದರೂ ಎತ್ತಿದ್ದಾರೆ. ಸಿರಿಕಲ್ಚರ್ ಕಾರ್ಯದರ್ಶಿಯವರು ಸಭೆ ಮಾಡಿ ಎನ್‌ಸಿಡಿಸಿಗೆ ಶಿಫಾರಸ್ಸು ಮಾಡಬೇಕೆಂದು ಅವ್ರೊತ್ತು ತೀರ್ಮಾನ ತೆಗೆದುಕೊಂಡಿದ್ದಾರೆ. ಪ್ರತಿ ವರ್ಷ ಆಡಿಟ್ ನಡೆಯುತ್ತಿದೆ. ಏನೂ ಅವ್ಯವಹಾರ ಆಗಿಲ್ಲವೆಂದುವರದಿ ಬಂದಿದೆ. ಹಿಂದೆ ಎನ್‌ಕ್ವಾಯರಿ ಆಗಿರುವುದರ ಮೇಲೆ ಮತ್ತೆ ಎನ್‌ಕ್ವಾಯರಿ ಮಾಡಿಸಬೇಕೆನ್ನುವ ಒಂದೇ ಒಂದು ಉದ್ದೇಶದಿಂದ ಲೋಕಾಯುಕ್ತಕ್ಕೆ ಕೊಟ್ಟಿರತಕ್ಕದ್ದು. ಮತ್ತೆ ಅದೇ ವಿಚಾರವನ್ನು ಇಲ್ಲೂ ಪ್ರಸ್ತಾಪ ಮಾಡಿರತಕ್ಕದ್ದು. ಅವರು ಎಂಎಲ್‌ಸಿ ಆಗುವುದಕ್ಕೆ ಮುಂಚೆ ಲೋಕಾಯುಕ್ತಕ್ಕೆ ದೂರನ್ನು ಕೊಟ್ಟಿದ್ದಾರೆ. ಅಲ್ಲಿ ವಿಚಾರಣೆ ನಡೆಯುತ್ತಿದೆ. ಅವರು ಎಂಎಲ್‌ಸಿ ಆದಮೇಲೆ ಮತ್ತೆ ಅದೇ ವಿಚಾರವನ್ನು ಮೇಲ್ಮನೆಯಲ್ಲಿ ಎತ್ತಿ ಸಹಕಾರ ಸಚಿವರ ಕಡೆಯಿಂದ ಸಿಓಡಿ ಎನ್‌ಕ್ವಾಯರಿ ಮಾಡಿಸುವುದು ಅಂದರೆ, ಕಾನೂನು ಮಂತ್ರಿಗಳು ಇಲ್ಲಿ ಇದ್ದಾರೆ. ಸಹಕಾರ ಸಂಘಗಳ ಕಾಯಿದೆ ಉಲ್ಲಂಘನೆಯಾದರೆ, ಅವ್ಯವಹಾರವಾದರೆ

ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಕ್ಕು ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇಲ್ಲಿ ಏನಾದರೂ ಅವ್ಯವಹಾರವಾಗಿದೆಯೆ? ಪರ್ಚೇಸ್‌ನಲ್ಲಾಗಲೀ ಟೆಂಡರ್ ಕರೆಯುವುದರಲ್ಲಾಗಲೀ ಏನೂ ಆಗಿಲ್ಲ. ಇಲಾಖೆಯ ಹಿರಿಯ ಅಧಿಕಾರಿಗಳ ಟೆಕ್ನಿಕಲ್ ಕಮಿಟಿ ಇದೆ. ಏನಾದರೂ ಅವ್ಯವಹಾರವಾಗಿದ್ದರೆ ಅವರು ಕ್ರಮ ತೆಗೆದುಕೊಳ್ಳಿಯೆಂದು ಶಿಫಾರಸ್ಸು ಮಾಡುತ್ತಿದ್ದರು. ಏನೂ ಇಲ್ಲದೆ ಇವತ್ತು ಅನಾವಶ್ಯಕವಾಗಿ ಹೀಗೆ ಮಾಡಲಾಗಿದೆ. ತಾವು ಎಷ್ಟೋ ಸಾರಿ ರೂಲಿಂಗ್ ಕೊಟ್ಟಿದ್ದೀರಿ. ಲೋಕಾಯುಕ್ತದಲ್ಲಿ ಯಾವುದೇ ವಿಷಯ ಪೆಂಡಿಂಗ್ ಇದ್ದರೆ ಇನ್ನೊಂದು ಎನ್‌ಕ್ವಾಯರಿ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೀರಿ. Lok Ayukta is a quasi-judicial body. C.O.D. is an administrative organ of the department. It does not have a statutory power. It is a departmental enquiry body,whereas the Lok Ayukta is a statutory body which has got its own police wing and everything is there.

ಶ್ರೀ ಎಸ್.ಎಸ್. ಪಾಟೀಲ್: ಏನಾಗುತ್ತದೆ ಆಗಲಿ ಅದಲ್ಲ ಪ್ರಶ್ನೆ, ಮುಂದಿನದು ಹೇಳಬೇಡಿ. ಪ್ರಶ್ನೆ ಏನೆಂದರೆ ಈ ಸದನದ ಸದಸ್ಯರು ಮಾಡಿದಂತಹ ತಪ್ಪನ್ನು ಆ ಸದನದಲ್ಲಿ ಚರ್ಚೆ ಮಾಡಬಹುದಾ? ಅದಕ್ಕೆ ಮಂತ್ರಿಗಳು ಉತ್ತರ ಕೊಡಬಹುದಾ? ಮೊದಲು ಅದು ತೀರ್ಮಾನವಾಗಬೇಕು. ಇಲ್ಲದಿದ್ದರೆ ಅಲ್ಲೇನು ಪ್ರೊಸಿಡಿಂಗ್ಸ್ ನಡೆದಿದೆ ಅದು ನಿಲ್ಲಬೇಕು. ಸರ್ಕಾರ ಮಾಡಿರತಕ್ಕದ್ದು ಸದನದ ಗೌರವಕ್ಕೆ ಅಪಮಾನವಾದುದು. ಸರ್ಕಾರ ನಿರ್ಮಾಣವಾಗಿರುವುದು ಈ ಸದನದಿಂದ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಸೂಕ್ಷ್ಮವಾಗಿರತಕ್ಕ ವಿಚಾರ. ಹೆಚ್ಚು ನಾವು ಕೆಣಕುತ್ತಿದ್ದರೆ ಪ್ರಯೋಜನವಾಗಲಾರದೆಂದು ನನ್ನ ಭಾವನೆ. ನಾನು ಮಾನ್ಯ ಸದಸ್ಯರ ಬಗ್ಗೆ ಪ್ರಸ್ತಾಪ ಮಾಡುತಿಲ್ಲ. ಪ್ರಸ್ತಾಪ ಏನು ಬಂತೆಂದರೆ, ಒಂದು ಸಾರಿ ಏನೋ ಆಗಿದೆ, ಅದನ್ನು ಮಾನ್ಯ ಸದಸ್ಯರು ಎತ್ತಬಹುದೇ ಎನ್ನತಕ್ಕ ಪ್ರಶ್ನೆ ಬಂತು. ಇದು ಬಹಳ ಸೂಕ್ಷ್ಮವಾದ ವಿಚಾರ ಇರುವುದರಿಂದ, ತಾವು ಬೆಳಿಗ್ಗೆ ಆಗಲೇ ಹೇಳಿದ್ದೀರಿ. ಮಾನ್ಯ ಪರಿಷತ್ತಿನ ಅಧ್ಯಕ್ಷರಿಗೆ ಪತ್ರ ಬರೆದು ಇದನ್ನೆಲ್ಲ ನಾನು ಮಾಡುತ್ತೇನೆ ಎಂದು ಹೇಳುವಾಗ, ಮಾನ್ಯ ಸೋಮಶೇಖರ್ ಅವರು ಪ್ರಸ್ತಾಪ ಮಾಡುವಾಗ ನಾನು ನಿನ್ನೆ ಇದ್ದೆ. ಅವರ ಬೇಡಿಕೆ ಕೂಡ ಅದೇ ಆಗಿದೆ. ಆದ್ದರಿಂದ ಇದನ್ನು ಅವರು ಪ್ರಸ್ತಾಪ ಮಾಡಿರುವುದರಿಂದ ಮತ್ತು ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದ್ದು ಇದನ್ನು ಕೆದಕಿ ಕೆದಕಿ ಹೋಗತಕ್ಕಂಥಾದ್ದು ತಪ್ಪಾಗುತ್ತದೆ. ಇದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ನಾವು ಇಷ್ಟಕ್ಕೆ ನಿಲ್ಲಿಸಿಬಿಟ್ಟರೆ ತುಂಬಾ ಒಳ್ಳೆಯದೆಂದು.....

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಈ ಸದನದಲ್ಲಿ ಆ ಪ್ರೊಸೀಡಿಂಗ್ಸ್ ನಿಲ್ಲಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್: ಅದು ಹೋದರೆ ಬೇಕಾದಷ್ಟು ಪ್ರೊಸಿಡೆಂಟ್ಸ್ ಉದ್ಭವವಾಗುತ್ತದೆ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿ ಆಗಿರತಕ್ಕಂಥಾದ್ದಕ್ಕೆ ಮಾನ್ಯಸದಸ್ಯರು ಹೇಳಿದ್ದಾರೆ. ಅವರ ವಿನಿಸಿಕೆ ಏನು ಎನ್ನತಕ್ಕದ್ದನ್ನು ಕೂಡ ಅವರು ಹೇಳಿದ್ದಾರೆ. ಈ ಮನೆಯ ಮತ್ತು ಈ ಮನೆಯ ಸದಸ್ಯರ ಗೌರವ ಇದರಲ್ಲಿ ಅಡಕವಾಗಿದೆ. ತಾವು ಆ ಸದನದ ಅಧ್ಯಕ್ಷರಿಗೆ ಪತ್ರ ಬರೆದು ನಿಜವಾದ ವಾಸ್ತವಾಂಶ ಏನು ಎನ್ನತಕ್ಕಂಥಾದ್ದನ್ನು ತಿಳಿಸಬೇಕಾಗಿರುವಂಥಾದ್ದು ಅವಶ್ಯಕತೆ ಇದೆ. ದಯವಿಟ್ಟು ಈ ಕೆಲಸವನ್ನು ತಾವು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಮತ್ತೆ ಈ ಒಂದು ಕಡೆ ವಿಚಾರಣೆ ನಡೆಯುತ್ತ ಇರುವಾಗ ಹೊಸದಾಗಿ ವಿಚಾರಣೆ ಎಂದರೆ ಅದು ಹೇಗೆ ಸಾಧ್ಯ? ಒಂದು ಕಡೆ ಸಿ.ಒ.ಡಿ. ವಿಚಾರಣೆ, ಇನ್ನೊಂದು ಕಡೆ ಲೋಕಾಯುಕ್ತ ವಿಚಾರಣೆ ಎಂದರೆ ಇದು ಎರಡೂ ಹೇಗೆ ಸಾಧ್ಯವಾಗುತ್ತದೆ ಎನ್ನತಕ್ಕದ್ದರ ಬಗ್ಗೆ ಕೂಡ ಬೆಳಕು ಚೆಲ್ಲಬೇಕಾಗುತ್ತದೆ. ನನ್ನ ಪ್ರಕಾರ, ಇಲ್ಲಿ ಕಾನೂನು ಮಂತ್ರಿಗಳು ಇಲ್ಲ. ಇದು ಸಾಧ್ಯವಿಲ್ಲ, ಯಾವುದಾದರೂ ಒಂದು ವಿಚಾರಣೆಯಾಗಬೇಕು.....

ಅಧ್ಯಕ್ಷರು: ಸಿಂಧ್ಯಾರವರು ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ: ಯಾವುದಾದರೂ ಒಂದು ವಿಚಾರಣೆ ಆಗಬೇಕೇ ವಿನಹ ಒಂದೇ ತಪ್ಪಿಗೆ ಎರಡು ಕಡೆ ವಿಚಾರಣೆ ಆಗತಕ್ಕಂಥಾದ್ದು ಸರಿಯಾದ ಕ್ರಮ ಕೂಡ ಅಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಅಧ್ಯಕ್ಷರೇ, ಈಗಲೂ ಕೂಡ ಕಾನೂನು ಇಲಾಖೆಯ ಸಲಹೆ ಕೇಳಿ ಪುನರ್ ಪರಿಶೀಲನೆ ಮಾಡುವುದಕ್ಕೆ ಬರುತ್ತದೆ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಅಧ್ಯಕ್ಷರೇ.....

ಅಧ್ಯಕ್ಷರು: ಆಯಿತು. ಸುಬ್ಬಾರೆಡ್ಡಿಯವರೇ ರಂಗನಾಥ್ ಅವರ ಅನುಭವ ನಮಗೂ, ನಿಮಗೂ ಇಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ತಾವು ಕೌನ್ಸಿಲ್‌ನಲ್ಲಿ ಚೇರ್ಮನ್ ಆಗಿದ್ದೀರಿ. ಇಂತಹ ಘಟನೆಗಳು ನಡೆದಿವೆ.....

(ಗೊಂದಲ)

ಅಧ್ಯಕ್ಷರು: ನಾನು ಬೆಳಿಗ್ಗೆ ಏನು ಹೇಳಿದೆ? ಕೆಳಮನೆ ಮತ್ತು ಮೇಲ್ಮನೆಗಳು ಅಣ್ಣತಮ್ಮಂದಿರ ಹಾಗೆ ಇರಬೇಕು. ಅಲ್ಲಿ ಪ್ರೊಸೀಡಿಂಗ್ಸ್ ಏನು ನಡೆಯುತ್ತಿದೆ ಅದು ಲೀಗಲ್ಲಾ, ಇಲ್ಲೀಗಲ್ಲಾ...ಪವರ್ಸ್ ಇದೆಯಾ...ಲೋಕಾಯುಕ್ತ....

ಶ್ರೀ ಪಿ.ಜಿ.ಆರ್. ಸಿಂಧ್ಯಾ: ತಾವು ತೀರ್ಮಾನ ಕೊಡುವ ಮುಂಚೆ ಇದು ಬಹಳ ಮಹತ್ವವಾದ ವಿಚಾರ ಇದೆ. Council is a body created by this House.

SRI K.H. RANGANATH: It is created by the Constitution.

SRI P.G.R. SINDHYA: By the Constitution through this House.

ಶ್ರೀ ಕೆ.ಹೆಚ್. ರಂಗನಾಥ್: ಅಬಾಲಿಶ್ ಮಾಡತಕ್ಕಂಥ ಅಧಿಕಾರ ನಮಗೆ ಇಲ್ಲ. ರಾಜ್ಯಾಂಗ ಅಸ್ತಿತ್ವಕ್ಕೆ ಬರುವಾಗ, ಯಾವ್ಯಾವ ಸದನಗಳು ಎಂದು ಮಾಡಿ ಅವುಗಳು ಅಸ್ತಿತ್ವಕ್ಕೆ ಬಂದಿವೆ. ನಾವು ಬೇಡ ಎಂದು ರೆಸೊಲ್ಯುಶನ್ ಮಾಡಿದರೆ ವಜಾ ಮಾಡುತ್ತಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ತಮಿಳುನಾಡಿನಲ್ಲಿ ಕೂಡ ಕೌನಿಲ್ಸ್ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಈ ಮನೆಯಿಂದ ಅಂತ ಅಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ನಮ್ಮ ಮನೆ ಇದೆಯಲ್ಲ, ನಿಜವಾಗಿ ಪ್ರತಿನಿಧಿಗಳಮನೆ, ಸಂವಿಧಾನ ಪ್ರಕಾರ ವಿಧಾನಸಭೆ ಅನುಷ್ಠಾನಕ್ಕೆ ಬಂದಿದೆ. ಕೆಲವೊಂದು ರಾಜ್ಯಗಳಲ್ಲಿ ಕೌನಿಲ್ಸ್ ಇಲ್ಲ. ಈಗ ರೆಸೊಲ್ಯುಶನ್ ಬೇಕಾದರೆ ಮಾಡೋಣ.

ಅಧ್ಯಕ್ಷರು: ಇದು ಎಷ್ಟು ಚರ್ಚೆ ನಡೆಸಿದರೂ ಒಂದೇ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, Kaul & Shakdher ದಲ್ಲಿ ಪುಟ 268ನ್ನು ತಮ್ಮಮಾಹಿತಿಗೋಸ್ಕರ ಮತ್ತು ಸಾರ್ವಜನಿಕವಾಗಿ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ ನಾನು ಓದುತ್ತೇನೆ. ಮಾನ್ಯ ರಂಗನಾಥ್ ಅವರು ಏನು ಹೇಳಿದ್ದಾರೆ ಅದರ ಬಗ್ಗೆ ನನ್ನ ಅಭಿಪ್ರಾಯವನ್ನು ನಾನು ಕೊಡುತ್ತಿಲ್ಲ. ವಿಧಾನ ಪರಿಷತ್ತನ್ನು ಅಬಾಲಿಶ್ ಮಾಡತಕ್ಕಂಥ ಅಧಿಕಾರ ವಿಧಾನಸಭೆಗೆ ಇದೆ ಎಂದು ನಾನು ಹೇಳಿದ್ದೇನೆ. ಅಷ್ಟೇನೆ.

ಶ್ರೀ ಕೆ.ಹೆಚ್. ರಂಗನಾಥ್: ರೆಸೊಲ್ಯುಶನ್ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಆ ವಿಚಾರದ ಬಗ್ಗೆ ನಾನು ಹೋಗುತ್ತಾ ಇಲ್ಲ. It is also constitutionally created.

Now I am referring to Kaul and Shakdher.

"On 30th March 1970 during the course of the debate in the Rajya Sabha, a member of the at House made certain allegations against the member of the Lok Sabha. After some discussion in the House, the Speaker addressed a letter to the Chairman, Rajya Sabha inviting his attention to the matter and observed inter alia, as follows:

'You will agree that it is not desirable for the members of one House to make allegations or cast reflections on the floor of the House on the members of the other House.' It is very clear.

Further;

> "Accordingly when a question of privilege or contempt of the House is raised in either House in which a member, officer or servant of the other House is involved, the procedure followed is that the Presiding Officer of the House in which the question of privilege is raised, refers the case to the Presiding Officer of the other House, only if he is satisfied on hearing the member who raises the question or on perusing any document where the complaint is based on document that a breach of privilege has been committed. Upon the case being so referred, it is the duty of the Presiding Officer of the other House to deal with the matter in the same way as if it were a case of breach of privilege of that House or of a member thereof. Thereafter, that Presiding Officer communicates to the Presiding Officer of the House where the question of privilege was originally raised, a report about the inquiry, if any, and the action taken on the reference.
>
> If the offending member, officer or servant tenders an apology to the Presiding Officer of the House in which the question of privilege is raised or to the Presiding Officer of the other House to which the reference is made, usually no further action in the matter is taken after such apology has been tendered."

ಈಗ ಪ್ರಶ್ನೆ ಏನಿದೆ? ಇದು ನಮ್ಮ ಸಂಪ್ರದಾಯ ಪ್ರಕಾರ ನಮ್ಮಲ್ಲಿರತಕ್ಕಂಥ ಪದ್ಧತಿಗಳ ಪ್ರಕಾರವಾಗಿ ಆಗಿರತಕ್ಕದ್ದು ಸರಿಯಿಲ್ಲ. ಆದರೆ ನಾನು ಮೇಲ್ಮನೆಯ ಸಭಾಪತಿಗಳ ತೀರ್ಮಾನವನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ನನಗೆ ಗೌರವ ಇದೆ. ನಾನು ಮೇಲ್ಮನೆಯಲ್ಲಿ ಸ್ವಲ್ಪದಿವಸ ಅಲ್ಲಿ ಸದಸ್ಯನಾಗಿ ಕೆಲಸ ಮಾಡಿರತಕ್ಕವನು. ಅದನ್ನು ಅಬಾಲಿಶ್ ಮಾಡಬೇಕು ಎಂದು ಹೇಳತಕ್ಕದ್ದು ನಮ್ಮ ಪಕ್ಷದ ಇರಾದೆ ಸಹಿತ ಅಲ್ಲ. ಅವರು ಇರಬೇಕು. ನಮಗೆ ಬುದ್ಧಿವಾದ ಹೇಳಬೇಕು, ಅವರೆಲ್ಲರೂ ಹಿರಿಯರು ಇದ್ದಾರೆ. ಆದ್ದರಿಂದ ನಾನು ಅದರ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಪ್ರಶ್ನೆ ಇಲ್ಲಿ ಏನಿದೆ? ಆ ಸದನ ನಡೆಯುವಾಗ ಅಥವಾ ಈ ಸದನ ನಡೆಯುವಾಗ ಯಾವುದೇ ಒಬ್ಬ ಸದಸ್ಯರ ಆತ್ಮಗೌರವದ ಪ್ರಶ್ನೆ ಬರುತ್ತದೆ. ಆದ್ದರಿಂದ ಇವತ್ತು ಮಂತ್ರಿಗಳು ಅಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಮತ್ತು ಅದೆಲ್ಲವನ್ನೂ ಸಹಿತ ತಾವು ತಮ್ಮ ಅಧಿಕಾರಸ್ಥಾನದಿಂದ ಅಲ್ಲಿಯ ಅಧ್ಯಕ್ಷರಿಗೆ ತಿಳಿಸಿ ಅದನ್ನು ಎಕ್ಸಪಂಜ್ ಮಾಡಿಸಬೇಕಾಗುತ್ತದೆ. ಹೊಸದಾಗಿ ಇದರ ಬಗ್ಗೆ

ಏನಾದರೂ ಆಗಬೇಕು ಎನ್ನುವುದು ಆದಲ್ಲಿ ಸರ್ಕಾರದ ಕ್ರಮ ಕೈಗೊಂಡಿರುವ ಬಗ್ಗೆ ಅಥವಾ ಮನೆಯ ಸದಸ್ಯರಾಗಲೀ, ಸರ್ಕಾರವಾಗಲೀ ಇದರ ಬಗ್ಗೆ ತಿಳುವಳಿಕೆ ಕೊಟ್ಟು ತಮ್ಮ ಮೂಲಕ ಚರ್ಚೆಗೆ ಅವಕಾಶ ಮಾಡಬಹುದು. ಈ ಕೆಲಸವನ್ನು ತಾವು ದಯವಿಟ್ಟು ಮಾಡಬೇಕೆಂದು ತಮ್ಮಲ್ಲಿ ಮನವಿಯನ್ನು ನಾನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ: ನಮ್ಮ ರೂಲ್ಸ್ ಆಫ್ ಬಿಸಿನೆಸ್‌ನಲ್ಲಿ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಸ್ವಾಮಿ - Rule 41 sub-rule (1) - Clause (u):

"It shall not ordinarily ask about the matters pending before any statutory tribunalor statutory authority performing any judicial or quasi-judicial functions or any Commission or Court of Inquiry appointed to enquire into investigate any matter. but may refer the matters concerned with the procedure or subject or stage of enquiry which is not likely to prejudice the consideration of matter by the Tribunal or the Commission or Court of Inquiry."

ಇದು ಈಗಾಗಲೇ ಒಂದು ತನಿಖೆ ನಡೆಸುತ್ತಾ ಇರತಕ್ಕದ್ದನ್ನು ಮತ್ತೊಂದು ಕಡೆ ತನಿಖೆ ನಡೆಸತಕ್ಕದ್ದು ಕೂಡ ಉಚಿತ ಅಲ್ಲ ಎನ್ನತಕ್ಕದ್ದು ಇದರಲ್ಲಿ ವ್ಯಕ್ತವಾಗುತ್ತದೆ. ನಮ್ಮ ನಾಯಕರು ಹೇಳಿದಹಾಗೆ ತಾವು ದಯವಿಟ್ಟು ಈ ಎಲ್ಲ ಅಂಶಗಳನ್ನು ಕೂಡ ಗಮನಿಸಿ ತಾವು ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ಅಲ್ಲಿ ಕಡತದಿಂದ ಈ ಬಗ್ಗೆ ಏನು ಚರ್ಚೆಯಾಗಿದೆ, ಪೂರ್ತಿಯಾಗಿರತಕ್ಕಂಥ ನಡಾವಳಿಗಳನ್ನು ತೆಗೆಯುವಂಥಾದ್ದು ಮಾಡಬೇಕು. ಆಮೇಲೆ ಕೌಲ್ ಅಂಡ್ ಶಕ್ದರ್‌ನಲ್ಲಿ ಏನು ಹೇಳಿದ್ದಾರೆ... ಇದು ಬ್ರೀಚ್ ಆಫ್ ಪ್ರಿವಿಲೇಜ್ ಎನ್ನತಕ್ಕದ್ದು ಕೂಡ ಬರುತ್ತದೆ ಎನ್ನುವಂಥಾದ್ದು ಇದೆ. ನಾನು ಈಗಾಗಲೇ ಹೇಳಿದ್ದೇನೆ ಏನೆಂದರೆ ಇದರಲ್ಲಿ ಸದಸ್ಯರ ಹಕ್ಕೂ ಉಂಟು, ಮನೆಯ ಹಕ್ಕೂ ಉಂಟು. ಈ ಎರಡನ್ನೂ ತಾವು ಕಾಪಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಮಂತ್ರಿ): ಆ ಮನೆಯ ಸದಸ್ಯರಾದ ಮಂತಿಮ್ಮೇಗೌಡರು ಒಂದು ಪ್ರಶ್ನೆ ಹಾಕಿದರು. ಅದೇನೆಂದರೆ ಮಾತನಾಡುತ್ತ ಅವರು ಪೀಠಿಕೆ ಶುರು ಮಾಡಿದರು. ನಮ್ಮ ಮಳವಳ್ಳಿ ತಾಲ್ಲೂಕಿನಲ್ಲಿ ಸುಮಾರು 17 ವರ್ಷಗಳ ಹಿಂದೆ ಮಹದೇಶ್ವರ ಸಿಲ್ಕ್ ಫಿಲಿಯೇಚರ್ ಫ್ಯಾಕ್ಟರಿ ಎಂಬ ಕೈಗಾರಿಕಾ ಸಹಕಾರಸಂಘದ ವತಿಯಿಂದ ಆರಂಭ ಮಾಡಿದ್ದು ಅದಕ್ಕೆ ಮಾಜಿ ಕಂದಾಯ ಸಚಿವರು ನೇತಾರರಾಗಿದ್ದರು. ಕಾರ್ಖಾನೆಯ ಕಟ್ಟಡ ಸುಮಾರು ಹತ್ತು ವರ್ಷಗಳ ಹಿಂದೆ 40 ಲಕ್ಷ ಅಂತ ಏನೋ ಹೇಳಿದರು. ಆದ್ದರಿಂದ ಇದನ್ನು ಸಿ.ಒ.ಡಿ.ಗೆ ಒಪ್ಪಿಸಬೇಕೆಂದು ಮಾಡಿದರು. ಅದಕ್ಕೆ ಮಾನ್ಯ ನಾಣಯ್ಯನವರು ಏನು ಕೇಳುತ್ತಾರೆ ಎಂದರೆ... "ಮಾನ್ಯ ಸಭಾಪತಿಗಳೇ, ಕಂದಾಯ ಸಚಿವರುಗಳು ಬೇಕಾದಷ್ಟು ಜನ ಇದ್ದಾರೆ. ರಮೇಶ ಜಿಗಜಿಣಗಿ ಇದ್ದಾರೆ, ಚಾಲಪ್ಪನವರು ಇದ್ದಾರೆ ಮತ್ತು ಬೇರೆಯವರೆಲ್ಲ ಇದ್ದಾರೆ. ಹಾಗಾದರೆ ಮಾಜಿ ಕಂದಾಯ ಸಚಿವರ ಹೆಸರನ್ನು ನೀವು ಹೇಳಬೇಕು, ಯಾಕೆಂದು ಸಾರಾಸಗಟಾಗಿ

ಹೇಳಬೇಕು" ಎಂದು ಪ್ರಶ್ನೆ ಮಾಡುತ್ತಾರೆ. ಆಗ ಮಲಿತಿಮ್ಮೇಗೌಡರು ಹೇಳುತ್ತಾರೆ- "ಮಾನ್ಯ ಸಭಾಪತಿಗಳೇ, ಮಾಜಿ ಕಂದಾಯ ಸಚಿವರು ಎಂದರೆ ನಮ್ಮ ಮಳವಳ್ಳಿಯಲ್ಲಿ ಸಾಮಾನ್ಯವಾಗಿ ಸೋಮಶೇಖರ್ ಅವರು ಮಾತ್ರ. ಮಾನ್ಯ ಚಾಲವ್ಪ ಆಗಲಿ, ಮತ್ತೊಬ್ಬರಾಗಲೀ ನಾನು ಹೇಳಲಿಲ್ಲ." ಅಂತ ಹೇಳುತ್ತಾರೆ. ಇಷ್ಟೇ, ಆ ಹೆಸರು ಬಂದಿರತಕ್ಕಂಥಾದ್ದು.

5.10 ಪಿ.ಎಂ

ಶ್ರೀ ಬಿ. ಸೋಮಶೇಖರ್: ಸಂಘದ ಅಧ್ಯಕ್ಷರು ಅಂತ ಹೇಳಿದ್ದರೆ ಅದು ಬರುತ್ತಿರಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ ನಾನು ಇದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರಲಿಲ್ಲ. ಆದರೆ ರೂಲ್ಸ್ ಮತ್ತು ಪ್ರೊಸೀಜರ್ಸ್‌ಗೆ ಸಂಬಂಧಪಟ್ಟ ಹಾಗೆ ಪ್ರಸ್ತಾವಾಗುತ್ತಿರುವುದರಿಂದ ಅದಕ್ಕೆ ಸೀಮಿತವಾಗಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಸಿಂಧ್ಯಾರವರು ಏನು ಹೇಳಿದರು, ಅಲ್ಲಿರತಕ್ಕಂಥ ಎಲ್ಲಾ ಪ್ರೊಸೀಡಿಂಗ್ಸ್‌ನ್ನು ಬದಲಾವಣೆ ಮಾಡಿಸಬೇಕು, ಅಂದರೆ ಕಡತದಿಂದ ತೆಗೆಯಬೇಕು ಎಂದು ಪ್ರಸ್ತಾಪ ಮಾಡಿದರು. ನಾನು ಅದಕ್ಕೆ ಹೇಳಿದ್ದು ತಾವು ಪತ್ರ ಬರೆದಿದ್ದೀರಿ ಅದು ಅಷ್ಟಕ್ಕೆ ನಿಂತರೆ ಒಳ್ಳೆಯದು ಅಂತ.

ಅಧ್ಯಕ್ಷರು: ನಾನು ಇನ್ನೂ ಪತ್ರ ಬರೆದಿಲ್ಲ, ಬರೆಯುತ್ತೇನೆಂದು ಹೇಳಿದ್ದೇನೆ.

ಶ್ರೀ ಕೆ.ಎಚ್. ರಂಗನಾಥ್: ಬರೆಯುತ್ತೇನೆಂದು ಹೇಳಿದ್ದೀರಿ, ಬರೆಯುತ್ತೀರಿ. ಇಲ್ಲಿ ಪ್ರಶ್ನೆ ಕೇಳಿದ್ದಾರೆ. ನಾನು ನೋಡಿದೆ. ಪ್ರಶ್ನೆ ಏತಕ್ಕೆ ಇದು? ಮಾನ್ಯ ಶ್ರೀ ಸೋಮಶೇಖರ್ ಅವರ ಹೆಸರು ಇದರಲ್ಲಿ ಎಲ್ಲೂ ಬರುವುದಿಲ್ಲ. ಪ್ರಶ್ನೆ ಇರುವುದು ಮಹದೇಶ್ವರ ಸಿಲ್ಕ್ ಫಿಲೇಚರ್ ಫ್ಯಾಕ್ಟರಿ ಮತ್ತು ಕೈಗಾರಿಕಾ ಸಹಕಾರಿ ಸಂಘ ನಿಯಮಿತ, ಅಂತ ಹೇಳಿ ಅದಕ್ಕೆ ಸಂಬಂಧಪಟ್ಟಂತೆ ಇದೆ. ಬಹಳ ಮಟ್ಟಿಗೆ ಉಪ ಪ್ರಶ್ನೆ ಹಾಕಿದಾಗ ಮಾನ್ಯ ಸದಸ್ಯರ ಪ್ರಶ್ನೆ ಬರಬಹುದು, ಅಥವಾ ಅವರ ಹೆಸರು ಬರಬಹುದು ಅಥವಾ ಸಹಕಾರ ಮಂತ್ರಿಗಳು ಪ್ರಸ್ತಾಪ ಮಾಡುವಾಗ ಪೂರ್ವ ಪೀಠಿಕೆಯಾಗಿ ಬರಬಹುದು. ಸಾಮಾನ್ಯವಾಗಿ ನಾವು ಆ ತರಹ ಅವಕಾಶ ಕೊಡುವುದರಿಂದ ಆ ತರಹ ಆಗುತ್ತಿದೆ. ಆ ದಿವಸ ಮಾನ್ಯ ಸಭಾಪತಿಗಳು ಇಲ್ಲಾ ನೀವು ಆ ಬಗ್ಗೆ ಪ್ರಸ್ತಾಪ ಮಾಡಕೂಡದು ಅದನ್ನು ಬಿಟ್ಟುಬಿಡಿ ಇದಕ್ಕೆ ಸಂಬಂಧಪಟ್ಟಂತೆ ಮಾತನಾಡಿ ಅಂತ ಹೇಳಿದ್ದರೆ ಚೆನ್ನಾಗಿ ಆಗುತ್ತಿತ್ತು. ಏನೋ ಅನಿವಾರ್ಯವಾಗಿ ಹೋಗಿದೆ. ಆದ್ದರಿಂದ ನನ್ನ ವಿನಂತಿ ತಮ್ಮಲ್ಲಿ ಏನೆಂದರೆ ವಿಷಯ ಅಷ್ಟಕ್ಕೆ ಸೀಮಿತವಾಗಬೇಕಾಗುತ್ತದೆ. ಏಕೆಂದರೆ ಇದು ಈಗ ನಾವು ಪ್ರಶ್ನೆ ಕಳುಹಿಸುತ್ತೇವೆ. ತಮ್ಮ ಕಾರ್ಯಾಲಯ ಒಪ್ಪುತ್ತದೆ. ತಾವು ಒಪ್ಪುತ್ತೀರಿ. ಇದಾದ ಮೇಲೆ ಸರ್ಕಾರಕ್ಕೆ ಮಂತ್ರಿಗಳಿಗೆ ಇದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುವಂತಹ ಅಧಿಕಾರ ಎಲ್ಲಿಂದ ಬರುತ್ತದೆ. ಅದು ಆಗುವುದಿಲ್ಲ. ನಾವು ಅದಕ್ಕೆ ಉತ್ತರ ಕೊಡಲೇಬೇಕಾಗುತ್ತದೆ. ನಾನು ನೋಡಿದೆ ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್ ಅವರ ಹೆಸರು ಇಲ್ಲಿ ಎಲ್ಲೂ ಬರುವುದಿಲ್ಲ. (ಅ) (ಆ) (ಇ) (ಈ) ಹೀಗೆ ನಾಲ್ಕು ಪ್ರಶ್ನೆ ಕೇಳಿದ್ದಾರೆ. ಎಲ್ಲೂ ಬರುವುದಿಲ್ಲ. ಬಹಳ ಮಟ್ಟಿಗೆ ಉಪ ಪ್ರಶ್ನೆ ಕೇಳುವಾಗ ಅಥವಾ ಪೀಠಿಕೆಯಾಗಿ ವಿಷಯ ಪ್ರಸ್ತಾಪ ಮಾಡುವಾಗ ಮಾನ್ಯ ಕಂದಾಯ ಮಂತ್ರಿಗಳು ಅಂದರೆ ಯಾರು ಅಂತ ಕೇಳುವಾಗ ಈ ತರಹ ಏನೋ ಬಂದಿರಬಹುದು. ಆದರೆ ಆ ಮನೆಯ ಸದಸ್ಯರು ಅಲ್ಲದೆ ಇರತಕ್ಕಂಥವರ ಹೆಸರು ಬರುವಾಗ

ಅಥವಾ ಈ ಮನೆಯ ಸದಸ್ಯರು ಇರುವಾಗ ಅವರು ಸ್ವಲ್ಪ ಇಲ್ಲಾ ಅವರ ಹೆಸರನ್ನು ಈ ಮನೆಯಲ್ಲಿ ಹೇಳಬೇಡಿ, ಈ ಮನೆಗೆ ಸಂಬಂಧಪಟ್ಟಿದ್ದು ಅಲ್ಲ, ಅಂತ ಹೇಳಿದ್ದರೆ ಅಷ್ಟಕ್ಕೆ ನಿಂತು ಹೋಗುತ್ತಿತ್ತು ಅನಿವಾರ್ಯವಾಗಿ ಏನೋ ಒಂದು ಪ್ರಸಂಗ ಒದಗಿ ಬಂದಿದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇಡೀ ಪ್ರೊಸೀಡಿಂಗ್ಸ್ ತೆಗೆದು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆ ಮಾನ್ಯ ಸದಸ್ಯರು ಹೇಳುವಾಗ ನನಗೆ ಮನ ನೊಂದಿದೆ ಎನ್ನುವ ಮಾತನ್ನು ಹೇಳುತ್ತಾ, ಒಂದು ವಿಚಾರಣೆ ಆಗುವಾಗ ಮತ್ತೊಂದು ವಿಚಾರಣೆಯನ್ನು ಮಾಡಬಹುದೇ, ಎಂದು ಹೇಳಿದ್ದು ಅದು ಲೀಗಲ್ ಮ್ಯಾಟರ್. ಅದನ್ನು ಪ್ರಶ್ನೆ ಮಾಡಬಹುದು. ಸರ್ಕಾರ ಮತ್ತೆ ಪುನರ್ ಪರಿಶೀಲನೆ ಮಾಡುವುದಕ್ಕೂ ಅವಕಾಶ ಇದೆ. ಇದು ಈ ರೀತಿ ಇರುವುದರಿಂದ ನನ್ನ ವಿನಂತಿ ತಮ್ಮ ಪರ್ಯಾಲೋಚನೆಗೆ ಏನೆಂದರೆ ಇಡೀ ಪ್ರೊಸೀಡಿಂಗ್ಸ್‌ನ್ನು ತೆಗೆಸಿ ಹಾಕುವಂತಹ ಪರಿಸ್ಥಿತಿ ಏನೂ ಬರಲಾರದು. ಏಕೆಂದರೆ ನಾನು ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದೆ, ಆ ಉತ್ತರದಲ್ಲಿ ಅವರ ಹೆಸರೂ ಎಲ್ಲೂ ಬರುವುದಿಲ್ಲ.

ಅಧ್ಯಕ್ಷರು: ಈಗ ನಾನು ಮಾನ್ಯ ಸದಸ್ಯರು ಹೇಳಿರುವುದು ಮತ್ತು ಮಾನ್ಯ ಮಂತ್ರಿಗಳಾದ ಶ್ರೀ ಕೆ ಎಚ್ ರಂಗನಾಥ್ ಅವರು ಹೇಳಿದ್ದನ್ನು ಕೇಳಿದ್ದೇನೆ. ಆ ದಿವಸ ಆ ಮನೆಯಲ್ಲಿ ಏನೇನು ಪ್ರೊಸೀಡಿಂಗ್ಸ್ ನಡೆಯಿತು ಅದನ್ನು ತರಿಸಿಕೊಳ್ಳುತ್ತೇನೆ. ತರಿಸಿಕೊಂಡು ಪತ್ರ ಬರೆಯುವುದು ಅಲ್ಲದೆ, ನಾನು ಮತ್ತು ಸಭಾಪತಿಗಳು ಒಟ್ಟಿಗೆ ಕುಳಿತುಕೊಂಡು ಮಾತನಾಡಿ ಇನ್ನು ಮುಂದೆ ಈ ರೀತಿ ಆಗುವುದನ್ನು ತಪ್ಪಿಸಬೇಕು. ಇದರಲ್ಲಿ ನಮ್ಮಿಬ್ಬರ ಜವಾಬ್ದಾರಿ ಇದೆ. ನನ್ನ ಜವಾಬ್ದಾರಿ ಇದೆ. ಅವರ ಜವಾಬ್ದಾರಿಯು ಇದೆ. ಅದರ ಬಗ್ಗೆ ನಾನು ಆದಷ್ಟು ಬೇಗ ಒಂದು ರೂಲಿಂಗ್ ಕೊಡುತ್ತೇನೆ. ಮತ್ತು ಸಭಾಪತಿಗಳನ್ನು ಕರೆದು ಮಾತನಾಡುತ್ತೇನೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಸಾಕು ಮಾಡೋಣ.

ಶ್ರೀ ಕೆ.ಎಂ ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ ನಾನು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. 20 ದಿವಸ ಆಯಿತು. ಇನ್ನೂ ಉತ್ತರ ಬರಲಿಲ್ಲ. ಇವತ್ತು ಸದನ ಮುಗಿಯುತ್ತಿದೆ. ಇವತ್ತು ನಾವು ಈ ಸದನದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳದಿದ್ದರೆ ಅಲ್ಲಿ ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಅಧ್ಯಕ್ಷರು: ನಮ್ಮ ಮುಂದೆ ಇವತ್ತು ಒಟ್ಟು 7 ಗಮನ ಸೆಳೆಯುವ ಸೂಚನೆಗಳು ಇವೆ. ಶೂನ್ಯ ವೇಳೆ ಆದ ತಕ್ಷಣ ಅದನ್ನೇ ತೆಗೆದುಕೊಳ್ಳುತ್ತೇವೆ. ಆಕಸ್ಮಾತ್ ನಿಮ್ಮ ಪ್ರಶ್ನೆಗೆ ಉತ್ತರ ಬರದಿದ್ದರೆ ನೀವು ಪ್ರಸ್ತಾಪ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ. ಆಮೇಲೆ ಅದರ ಬಗ್ಗೆ ಅವರು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಕೆ.ಎಂ ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ ನಾನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ, ಅದು ರಿಕಾರ್ಡ್‌ಗೆ ಹೋಗಲಿ.

ಅಧ್ಯಕ್ಷರು: ಮೊದಲು ಈ 7 ಗಮನ ಸೆಳೆಯುವ ಸೂಚನೆಗಳು ಆಗಲಿ. ಆಮೇಲೆ ಯಾರ್ಯಾರ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೋ ಅವರು ಪ್ರಸ್ತಾಪ ಮಾಡಿ. ಅದನ್ನು ಸರ್ಕಾರದ ಗಮನಕ್ಕೆ ತನ್ನಿ ಆಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಎಲ್ಲಾ ತೆಗೆದುಕೊಂಡು ಪೂರ್ತಿ ಮಾಡೋಣ.